# ದಿಟ್ಟ ಹೋರಾಟಗಾರ್ತಿಗೆ 'ಶಾಂತಿ' ಪುರಸ್ಕಾರ



ಪ್ರವೀಣ ಕುಲಕರ್ಣಿ

ಪ್ರಾಯಶಃ ಇಂತಹ ಸನ್ನಿವೇಶ ಬಲು ಅಪರೂಪ. ಮಹಿಳೆಯರ ಹಕ್ಕುಗಳ ಹೋರಾಟಗಾರ್ತಿ, ಇರಾನ್‌ನ ನರ್ಗಿಸ್ ಮೊಹಮ್ಮದಿ ಅವರ ಯಾವ ಸಾಧನೆಗಾಗಿ ಅವರನ್ನು ನೊಬೆಲ್ ಶಾಂತಿ ಪ್ರಶಸ್ತಿ ಹುಡುಕಿಕೊಂಡು ಬಂದಿದೆಯೋ ಅದನ್ನು ಅವರ ತವರು ದೇಶ, ದೇಶದ್ರೋಹ ಎಂದು ಕರೆದು, ಅವರನ್ನೀಗ ಜೈಲಿನಲ್ಲಿ ಬಂದಿಯಾಗಿಸಿದೆ. ಪ್ರಶಸ್ತಿ ಬಂದ 'ಸಂಭ್ರಮಾಚರಣೆ'ಯನ್ನು ಅವರು ಕಂಬಿಗಳ ಹಿಂದೆಯೇ ಮಾಡಿದ್ದಾರೆ.

ಟೆಹರಾನ್‌ನ ಕಾರಾಗೃಹದಲ್ಲಿರುವ ಅವರ ವಿರುದ್ಧ ಹಲವು ಪ್ರಕರಣಗಳು ದಾಖಲಾಗಿವೆ. ಅವುಗಳಲ್ಲಿ ದೇಶದ್ರೋಹದ ಪ್ರಕರಣ ಕೂಡ ಒಂದಾಗಿದೆ. ಇರಾನ್‌ನಲ್ಲಿ ತುಳಿತಕ್ಕೆ ಒಳಗಾದ ಮಹಿಳೆಯರ ಪರ ಧ್ವನಿ ಎತ್ತಿದ, ಮಾನವ ಹಕ್ಕುಗಳಿಗಾಗಿ ಹೋರಾಡಿದ ಮತ್ತು ಎಲ್ಲರಿಗೂ ಸ್ವಾತಂತ್ರ್ಯ ಸಿಗಬೇಕೆನ್ನುವ ಆಶಯದಿಂದ ಕೆಲಸ ಮಾಡಿದ ಕಾರಣಕ್ಕಾಗಿ ನರ್ಗಿಸ್ ಅವರಿಗೆ ನೊಬೆಲ್ ಶಾಂತಿ ಪುರಸ್ಕಾರ ದಕ್ಕಿದೆ. ಇರಾನ್‌ನಲ್ಲಿ ಮಹಿಳೆಯರಿಗೆ ಇರುವ ವಸ್ತ್ರ ಸಂಹಿತೆಯನ್ನು ವಿರೋಧಿಸಿದ್ದ ಮಹಸಾ ಅಮಿನಿ ಅವರ ಸಂಶಯಾಸ್ಪದ ಸಾವಿನ ಒಂದು ವರ್ಷದ ಬಳಿಕ ಬಂದಿರುವ ಈ ಪ್ರಶಸ್ತಿಯು ಆ ದೇಶದ ಮಹಿಳಾ ವಲಯದಲ್ಲಿ ಹೊಸ ಸಂಚಲವನ್ನೇ ಮೂಡಿಸಿದೆ. 'ಮಹಿಳೆ–ಬದುಕು–ಸ್ವಾತಂತ್ರ್ಯ' ಹೆಸರಿನಲ್ಲಿ ಇರಾನ್‌ನಲ್ಲಿ ನಡೆದಿರುವ ಹೋರಾಟಕ್ಕೂ ಹೊಸ ಶಕ್ತಿಯನ್ನು ತುಂಬಿದೆ.

ಮಹಿಳೆಯರ ಮೇಲೆ ಇರಾನ್‌ನಲ್ಲಿ ನಡೆದಿರುವ ಧಾರ್ಮಿಕ ದಬ್ಬಾಳಿಕೆಗೆ ದಶಕಗಳ ಇತಿಹಾಸವಿದೆ. ಅಷ್ಟೂ ವರ್ಷಗಳಿಂದ ಮಹಿಳೆಯು ಶಾಂತ ರೀತಿಯಲ್ಲೇ ತನ್ನ ಪ್ರತಿಭಟನೆಯನ್ನು ದಾಖಲಿಸುತ್ತಾ ಬಂದಿದ್ದಾಳೆ. ಇರಾನ್‌ನಲ್ಲಿ 1979ರಲ್ಲಿ ನಡೆದ ಕ್ರಾಂತಿಯ ಬಳಿಕ ಇಸ್ಲಾಮಿಕ್ ಧರ್ಮಬೋಧಕ ಆಯತುಲ್ಲಾ ಖೊಮೇನಿ ಅವರು ಸರ್ಕಾರದ ಮೇಲೆ ಬಿಗಿಹಿಡಿತ ಸಾಧಿಸಿದ್ದರು. ಖೊಮೇನಿ ಅವರ ಆಡಳಿತ ಮಾಡಿದ ಮೊದಲ ಕೆಲಸವೆಂದರೆ ಮಹಿಳೆಯರ ಮೇಲೆ ಹಲವು ಕಟ್ಟಳೆಗಳನ್ನು ವಿಧಿಸಿದ್ದು. ಅದಕ್ಕೆ ಮಹಿಳೆಯರ ನೇತೃತ್ವದಲ್ಲೇ ಭಾರಿ ವಿರೋಧ ವ್ಯಕ್ತವಾದರೂ ಖೊಮೇನಿ ತಮ್ಮ ನಿರ್ಧಾರದಿಂದ ಒಂದಿಂಚೂ ಕದಲಿರಲಿಲ್ಲ. ಆದರೆ, ದೇಶದ ಸ್ತ್ರೀಸಂಕುಲ ಎಂದಿಗೂ ತನ್ನ ಹೋರಾಟವನ್ನು ಬಿಟ್ಟುಕೊಡಲಿಲ್ಲ. 1990ರ ದಶಕದಲ್ಲಿ ಈ ಹೋರಾಟಕ್ಕೆ ಧುಮುಕಿದವರು ನರ್ಗಿಸ್. ವಿಜ್ಞಾನ ಪದವೀಧರೆಯಾಗಿ ಓದು ಮುಗಿಸಿ, ಎಂಜಿನಿಯರ್ ಆಗಿ ಕೆಲಸಕ್ಕೆ ಸೇರಿದ ಅವರು, ಹೋರಾಟದ ಜೀವಸೆಲೆಯನ್ನು ಎಂದಿಗೂ ಬತ್ತಲು ಬಿಟ್ಟವರಲ್ಲ. ಮಹಿಳಾ ಹಕ್ಕುಗಳ ಕುರಿತು ಪತ್ರಿಕೆಗಳಲ್ಲಿ ಅವರು ಲೇಖನಗಳನ್ನೂ ಬರೆದರು.

ಸರ್ಕಾರದ ನೀತಿಗಳನ್ನು ತುಂಬಾ ತೀಕ್ಷ್ಣವಾಗಿ ಟೀಕಿಸಿದ ಅವರು ಮೊದಲ ಬಾರಿಗೆ 1998ರಲ್ಲಿ ಬಂಧನಕ್ಕೆ ಒಳಗಾಗಿದ್ದರು. ನೊಬೆಲ್ ಪುರಸ್ಕಾರ ಪಡೆದ ಮುಸ್ಲಿಂ ಜಗತ್ತಿನ ಮೊದಲ ಮಹಿಳೆ ಎಂಬ ಹಿರಿಮೆಗೆ ಪಾತ್ರರಾದ ಶಿರಿನ್ ಎಬಡಿ ಅವರು ಸ್ಥಾಪಿಸಿದ ಡಿಫೆಂಡರ್ಸ್ ಆಫ್ ಹ್ಯೂಮನ್ ರೈಟ್ಸ್ ಸೆಂಟರ್‌ಗೆ ಅವರು ಸೇರ್ಪಡೆಗೊಂಡರು. ಅಲ್ಲಿಂದ ಅವರ ಹೋರಾಟ ನಿರಂತರವಾಗಿ ನಡೆದುಕೊಂಡು ಬಂದಿದೆ. ಇದುವರೆಗೆ ಅವರನ್ನು 13 ಸಲ ಬಂಧಿಸಲಾಗಿದೆ. ಐದು ಪ್ರಕರಣಗಳಲ್ಲಿ ತಪ್ಪಿತಸ್ಥೆ ಎಂಬ ತೀರ್ಪು ಹೊರಬಿದ್ದಿದೆ. ಅವರಿಗೆ 31 ವರ್ಷಗಳ ಜೈಲು ಶಿಕ್ಷೆಗೆ ಗುರಿಪಡಿಸಲಾಗಿದೆ. 154 ಛಡಿ ಏಟುಗಳ ಶಿಕ್ಷೆಯನ್ನೂ ನೀಡಲಾಗಿದೆ. ಟೆಹರಾನ್‌ನ ಅತ್ಯಂತ ಭಯಾನಕ ಜೈಲಿನಲ್ಲಿ ಅವರನ್ನು ಬಂಧಿಸಿಡಲಾಗಿದೆ. ನರ್ಗಿಸ್ ಅವರ ವಿರುದ್ಧದ ಈ ಕ್ರಮಕ್ಕೆ ಇರಾನ್ ತುಂಬಾ ಪ್ರತಿರೋಧಗಳು ಹೆಚ್ಚುತ್ತಾ ಹೋದಂತೆಯೇ ಅವರ ಸಾಧನೆಯ ಕಥೆಗಳು ಜಗತ್ತಿನ ತುಂಬಾ ಬಿಚ್ಚಿಕೊಳ್ಳುತ್ತಾ ಹೊರಟಿವೆ.

ನರ್ಗಿಸ್ ಅವರಿಗೆ ಯಾವುದೇ ಫೋನ್ ಕರೆಗಳನ್ನು ನೀಡುವಂತಿಲ್ಲ, ಯಾರಿಗೂ ಅವರ ಭೇಟಿ ಮಾಡಲು ಆಸ್ಪದ ಕೊಡುವಂತಿಲ್ಲ ಎಂದು ಅಲ್ಲಿನ ಸರ್ಕಾರ ಕಟ್ಟಪ್ಪಣೆ ಮಾಡಿದೆ. ಈ ಮಧ್ಯೆಯೂ ದಿ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಗೆ ಅವರೊಂದು ಲೇಖನವನ್ನು ಗುಟ್ಟಾಗಿ ಬರೆದುಕೊಟ್ಟರು. ಅದು ಇದೇ ವರ್ಷದ ಸೆಪ್ಟೆಂಬರ್‌ನಲ್ಲಿ 'The more they lock us up, the stronger we become (ಅವರು ನಮ್ಮನ್ನು ಬಂಧಿಸಿಟ್ಟಷ್ಟೂ ನಾವು ಬಲಿಷ್ಠರಾಗಿ ಹೊರಹೊಮ್ಮುವೆವು)' ಎಂಬ ತಲೆಬರಹದ ಅಡಿಯಲ್ಲಿ ಪ್ರಕಟವಾಗಿದೆ.

ನರ್ಗಿಸ್ ಅವರನ್ನು ಬಂಧಿಸಿಟ್ಟಿರುವ ಟೆಹರಾನ್‌ನ ಎವಿನ್ ಜೈಲಿನ ಹಿಂಭಾಗದಲ್ಲೇ ಅಲ್‌ಬುರ್ಜ್ ಪರ್ವತಶ್ರೇಣಿ ಇದೆ. ಜೈಲಿನ ಕಿಟಕಿ ತೆರೆದರೆ ಆ ಪರ್ವತಶ್ರೇಣಿಯೇ ಕಣ್ಣಿಗೆ ಬೀಳುತ್ತದೆ. ಅಲ್ಲಿನ ಕಾಡು ಹೂವುಗಳು, ಹಸಿರು ಹಾಗೂ ಹಿಮಾಚ್ಛಾದಿತ ಶಿಖರಗಳನ್ನು ನೋಡುತ್ತಲೇ ನರ್ಗಿಸ್ ದಿನದ ಬಹುಪಾಲು ಸಮಯವನ್ನು ಕಳೆಯುವುದುಂಟು. 'ನಾನು ಪ್ರತಿದಿನ ಕಿಟಕಿಗೆ ಎದುರಾಗಿ ಕುಳಿತು ಹೊರಗಿನ ಹಸಿರನ್ನು ನೋಡುತ್ತೇನೆ. ಮುಕ್ತ ಇರಾನ್‌ಗಾಗಿ ಕನಸುಗಳನ್ನೂ ಕಾಣುತ್ತೇನೆ' ಎಂದು ಅವರು ಬರೆದಿದ್ದಾರೆ. ದೇಶದ ನಾಲ್ಕನೇ ಒಂದು ಭಾಗದಷ್ಟು ರಾಜಕೀಯ ಕೈದಿಗಳನ್ನು ಇದೇ ಜೈಲಿನಲ್ಲಿ ಬಂಧಿಸಿಡಲಾಗಿದೆ. ಚಿತ್ರಹಿಂಸೆಗೂ ಈ ಜೈಲು ಕುಖ್ಯಾತಿ ಗಳಿಸಿದೆ. ಅಲ್ಲಿನ ಯಾವ ಚಿತ್ರಹಿಂಸೆಯೂ, ದೈಹಿಕ ಬಳಲಿಕೆಯೂ ನರ್ಗಿಸ್ ಅವರನ್ನು ಧೃತಿಗೆಡಿಸಿಲ್ಲ. 'ಶೂರ ಇರಾನ್ ತಾಯಂದಿರ ಜತೆಗೆ ನಾನು ಸದಾ ನಿಲ್ಲುವೆ. ತಾರತಮ್ಯದ ವಿರುದ್ಧ ನನ್ನ ಬದುಕಿನ ಕೊನೆಯವರೆಗೂ ಹೋರಾಡುವೆ. ಎಲ್ಲ ಬಂಧನಗಳಿಂದ ಮಹಿಳೆ ಮುಕ್ತಳಾದಾಗಲೇ ನನಗೂ ಮುಕ್ತಿ' ಎಂದು ಇರಾನ್‌ನ ನಾಯಕರ ಎದುರೇ ಹೇಳಬಲ್ಲ ಛಾತಿ ಅವರಿಗಿದೆ.

ನೊಬೆಲ್ ಪ್ರಶಸ್ತಿ ಸಿಕ್ಕ ಕ್ಷಣದಲ್ಲಿ ಅವರು ನೀಡಿದ ಪ್ರತಿಕ್ರಿಯೆ ತುಂಬಾ ಅರ್ಥಪೂರ್ಣವಾಗಿದೆ. 'ಗೆಲುವು ಹತ್ತಿರದಲ್ಲೇ ಇದೆ ಎನ್ನುವುದರ ಸಂಕೇತ ಇದಾಗಿದೆ' ಎಂದು ನರ್ಗಿಸ್ ಹೇಳಿದ್ದಾರೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65